**ತಾತ:** ಪುಟ್ಟ ನಿನಗೆ ಕೊಟ್ಟ ಭಗವದ್ಗೀತೆಯಲ್ಲಿ ಏನಿದೆ ಅಂತ ಗೊತ್ತಾಯ್ತಾ?
**ಮೊಮ್ಮಗ:** ಗೊತ್ತಾಯ್ತು ತಾತ, ಅಕ್ಕನ ಫೋಟೊ ಇದೆ, ಮಧ್ಯದಲ್ಲಿ ನವಿಲುಗರಿ ಇದೆ, ಕೊನೆಯ ಪುಟದಲ್ಲಿ ನೀವಿಟ್ಟಿರೋ ನೂರು ರೂಪಾಯಿ ಇದೆ.

**ನ್ಯಾಯಾಧೀಶರು:** ಏನಯ್ಯಾ, ನಿನಗೆ 80 ವರ್ಷ ಆಗಿದೆ. ಈಗಲೂ ನೀನು ಕಳ್ಳತನ ಮಾಡಬೇಕಾ?
**ಅಪರಾಧಿ:** ಸ್ವಾಮಿ, ಇದು ಈಗ ಕಳ್ಳತನ ಮಾಡಿದ್ದಲ್ಲ, ನಾನು 50 ವರ್ಷದಲ್ಲಿ ಇದ್ದಾಗ ಮಾಡಿದ ಕಳ್ಳತನದ ಕೇಸು.

**ಆತ:** ನಾನು ಎಲ್ಲೆಂದರಲ್ಲಿ ದಾನಿಗಳ ಬಗ್ಗೆ ಹೆಚ್ಚು ಮಾತಾಡುತ್ತೇನೆ.
**ಈತ:** ಹೌದಾ, ನೀನು ಏನ್ ಕೆಲಸ ಮಾಡ್ತಿರೋದು?
**ಆತ:** ಎಲ್ಲಿಂದರಲ್ಲಿ ಭಿಕ್ಷೆ ಬೇಡ್ತಾ ಇದ್ದೇನೆ.




ನಿಮಗೆ ಹುಡುಗನ ಬಗ್ಗೆ ಅನುಮಾನವೇ ಬೇಡಾ ಅಂತಾ "ಕುಂಭಮೇಳ"ದಲ್ಲಿ ಸ್ನಾನ ಮಾಡ್ತಿರೋ ಫೋಟೋನೆ ತಂದಿದೀನಿ ನೋಡಿ....!!

**ಪ್ರಕಾಶ:** ಸಾರ್ ನಿಮಗೆ ಪುನರ್ಜನ್ಮದಲ್ಲಿ ನಂಬಿಕೆ ಇದೆಯಾ?
**ಅಧಿಕಾರಿ:** ಖಂಡಿತ ಇದೆ.
**ಪ್ರಕಾಶ:** ಅದನ್ನು ಹೇಗೆ ಹೇಳುತ್ತೀರಿ?
**ಆಫೀಸರ್:** ಹೋದ ತಿಂಗಳು ನೀನು ನಮ್ಮ ತಾತ ತೀರಿಹೋಗಿದ್ದಾರೆ ಅಂತ ರಜಾ ತೆಗೆದುಕೊಂಡಿದ್ದೆ, ಮೊನ್ನೆ ನಿಮ್ಮ ತಾತ ನನ್ನನ್ನು ಕಂಡು ಮಾತಾಡಿಸಿದರು. ಇದಕ್ಕಿಂತಲೂ ಉದಾಹರಣೆ ಬೇಕೆ?

**ಅರವಿಂದ:** ಗಿರಿ, ನಿನಗೆ ಹೆಂಡತಿ ಅಥವಾ ಪ್ರಿಯತಮೆ ಇವರಿಬ್ಬರಲ್ಲಿ ಯಾರಿಂದ ಬೈಸಿಕೊಳ್ಳುವುದಕ್ಕೆ ಇಷ್ಟಪಡುತ್ತೀಯ?
**ಗಿರಿ:** ಹೆಂಡತಿಯಿಂದ.
**ಅರವಿಂದ:** ಏಕೆ ಈ ಆಯ್ಕೆ?
**ಗಿರಿ:** ಪ್ರಿಯತಮೆ ಬೀದಿಯಲ್ಲಿ ಬೈಯಲು ಶುರು ಮಾಡ್ಕೋತಾಳೆ, ಆದರೆ ಹೆಂಡತಿ ಮನೇಲಿ ಮಾತ್ರ ಬೈತಾಳೆ.

**ಪತಿ:** ಕವಿತಾ, ನಾನು ಇವತ್ತು ಕಣ್ಣಿನ ಡಾಕ್ಟರ್ ಹತ್ತಿರ ಹೋಗಬೇಕು.
**ಕವಿತಾ:** ಯಾಕ್ರೀ... ಏನಾಯ್ತು?
**ಪತಿ:** ಇಷ್ಟು ದಿನ ಹೇಗೇಗೋ ಕಾಣುತ್ತಿದ್ದ ನೀನು ಇವತ್ತು ನನ್ನ ಕಣ್ಣಿಗೆ ಬಹಳ ಅಂದವಾಗಿ ಕಾಣುತ್ತಿದ್ದೀಯ ಅದಕ್ಕೆ. ನನ್ನ ಕಣ್ಣುಗಳ ಬಗ್ಗೆ ನನಗೆ ಅನುಮಾನ ಬಂದಿದೆ.

**ಕಿರಿಯ ನರ್ಸ್:** ಸಿಸ್ಟರ್, ಇವತ್ತು ಆಪರೇಷನ್ ಆಗಬೇಕಾಗಿದ್ದ ಆ ರೋಗಿ ಓಡಿ ಹೋಗಿದ್ದಾನೆ.
**ಹಿರಿಯ ನರ್ಸ್:** ಒಳ್ಳೆಯದೇ ಆಯಿತು ಬಿಡು, ಹೇಗೋ ಬದುಕಿಕೊಳ್ಳಲಿ.

**ರಾಜು:** ರವಿ, ನಿನ್ನ ಹೆಂಡತಿ ವೇಗವಾಗಿ ಕಾರು ಓಡಿಸುವುದನ್ನು ಹೇಗೆ ನಿಯಂತ್ರಿಸಿದೆ?
**ರವಿ:** ಓ ಅದಾ, ಏನಾದರೂ ಆಕ್ಸಿಡೆಂಟ್ ಆದರೆ ಪತ್ರಿಕೆಯವರು ನಿನ್ನ ವಯಸ್ಸನ್ನು ಹಾಕುತ್ತಾರೆ ಅಂದೆ ಅಷ್ಟೆ.

**ನ್ಯಾಯಾಧೀಶರು:** ಅಲ್ಲಯ್ಯಾ, ಚಿನ್ನದ ಅಂಗಡಿಗೆ ನುಗ್ಗಿದ್ದು ನಿಜ ಅಂತ ಹೇಳ್ತಾ ಇದ್ದೀಯಾ, ಆದರೆ ಏನನ್ನು ಕದಿಯಲಿಲ್ಲ ಅಂತ ಬೇರೆ ಹೇಳ್ತಾ ಇದ್ದೀಯಲ್ಲ?
**ಅಪರಾಧಿ:** ಹೌದು ಸ್ವಾಮಿ, ಅಲ್ಲಿರುವ ಯಾವ ಡಿಸೈನ್ ಕೂಡ ನನಗೆ ಹಿಡಿಸಲಿಲ್ಲ.

**ರಘು:** ಸಂಜು, ನಿನ್ನ ಹೆಂಡತಿ ಕಿವಿ ಸರಿಯಾಗಿ ಕೇಳಿಸುವುದಿಲ್ಲ ಅಂತ ಹೇಳಿದ್ದೀಯಲ್ಲ, ಯಾರಾದರೂ ಡಾಕ್ಟರ್‌ಗೆ ತೋರಿಸ್ದಾ ಹೇಗೆ?
**ಸಂಜು:** ಅವಳು ಡಾಕ್ಟರ್ ಹತ್ತಿರ ಬರೋದಕ್ಕೆ ಇಷ್ಟ ಪಡ್ತಾ ಇಲ್ಲ.
**ರಘು:** ಏಕೆ?
**ಸಂಜು:** ನನ್ನಲ್ಲಿರುವ ತಬಲಾಗಳನ್ನು ಮೊದಲು ಮಾರಬೇಕಂತೆ.

ಚಿನ್ನ ಕಳ್ಳ ಸಾಗಾಣಿಕೆ.....ನಟಿ
**ರನ್ಯಾ ಹಿಂದೆ ಪ್ರಭಾವಿ ನೆರಳು!**




ಬೇರೇ ಯಾವ ಅಂಗಡೀಲಿ ಬೇಕಾದ್ರು, ಒಡವೇ ತೊಗೋಳೆ..ಈ ಅಂಗಡೀಗೆ ಮಾತ್ರ ನನ್ನ "ನೆರಳು" ಬೀಳೋಹಾಗಿಲ್ಲಾ..ನಡೀ..ನಡೀ..!!

**ದಿನೇಶ:** ರವಿ, ನಾನೊಂದು ಹೊಸ ರೀತಿಯ ಕಂಪ್ಯೂಟರ್ ಸೃಷ್ಟಿಸಿದ್ದೇನೆ.
**ರವಿ:** ಏನು ಅದರ ವಿಶೇಷ?
**ದಿನೇಶ:** ಅದು ತಾನು ಮಾಡಿದ ತಪ್ಪನ್ನು ಬೇರೊಂದು ಕಂಪ್ಯೂಟರ್ ಮೇಲೆ ಹಾಕುತ್ತದೆ.

**ಪ್ರಿಯಕರ:** ನೀನು ನನ್ನ ಹತ್ತಿರ ಇದ್ದರೆ ನನಗೆ ಊಟವೇ ಬೇಕಾಗಿಲ್ಲ.
**ಪ್ರಿಯತಮೆ:** ನೀನು ಈ ಮಾತನ್ನು ಹೇಳೇ ಹೇಳುತ್ತೀಯಾ ಅಂತ ಗೊತ್ತಿತ್ತು. ಅದಕ್ಕೆ ನಾನು ಬಾಕ್ಸ್‌ನಲ್ಲಿ ನನಗಾಗಿ ಊಟ ತಂದಿದ್ದೇನೆ.

**ಶಿಕ್ಷಕ:** ಗೋಪಾಲ, ನೀನು ಮನೆಯಲ್ಲಿ ತಂದೆಗೆ ಹೆದರುತ್ತೀಯೋ, ತಾಯಿಗೆ ಹೆದರುತ್ತೀಯೋ?
**ಗೋಪಾಲ:** ತಾಯಿಗೆ ಸಾರ್.
**ಶಿಕ್ಷಕ:** ಏಕೆ?
**ಗೋಪಾಲ:** ನಮ್ಮ ತಾಯಿಗೆ ತಂದೆಯೇ ಹೆದರುತ್ತಾರಲ್ಲ.

**ರಂಗ:** ಕೃಷ್ಣ, ನಿನ್ನ ಗೆಳೆಯ ರಮೇಶನ ಹೆಂಡತಿ ಓಡಿ ಹೋದ ಮೇಲೆ ಇನ್ನೊಂದು ಮದುವೆಯಾದನಲ್ಲ, ಈಗ ಸುಖವಾಗಿರುವನೇ?
**ಕೃಷ್ಣ:** ಅವನಿಗೆಲ್ಲಿ ಸುಖ? ಮೊದಲನೆಯ ಹೆಂಡತಿಯ ಮತ್ತೊಂದು ಅವತಾರ ಎರಡನೆಯ ಹೆಂಡತಿ. ಅದರ ಬಗ್ಗೆಯೇ ಚಿಂತೆ ಮಾಡ್ತಿದ್ದಾನೆ.

ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ